ದಿನಾಂಕ 17–8–2019 ರಂದು ಬೆಳಿಗ್ಗೆ 11.00 ಗಂಟೆಗೆ ಕುಲಪತಿಯವರ ಸಭಾಂಗಣ, ಕೃವಿವಿ, ರಾಯಚೂರಿನಲ್ಲಿ ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 41ನೇ ಸಭೆಯ ನಡವಳಿಗಳು:

ಉಪಸ್ಥಿತರು:

| | | |
|---|---|---|
| 1. | ಡಾ. ಕೆ.ಎನ್. ಕಟ್ಟಿಮನಿ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು |
| 2. | ಡಾ. ಶಿವರಾಜ ಪಾಟೀಲ್, ವಿಧಾನ ಸಭಾ ಸದಸ್ಯರು, ರಾಯಚೂರು | ಸದಸ್ಯರು |
| 3. | ಡಾ. ಎಂ. ಶೇಖರಗೌಡ, ಹೇರೂರು, ಗಂಗಾವತಿ, ಕೊಪ್ಪಳ ಜಿಲ್ಲೆ | ಸದಸ್ಯರು |
| 4. | ಶ್ರೀಮತಿ ಹೇಮಾವತಿ ಲಂಕೇಶ, ಗಂಗಾವತಿ ಕೊಪ್ಪಳ ಜಿಲ್ಲೆ | ಸದಸ್ಯರು |
| 5. | ಶ್ರೀ ಅಮರೇಶ ಬಲ್ಲಿದವ, ದೇವದುರ್ಗ, ರಾಯಚೂರು ಜಿಲ್ಲೆ | ಸದಸ್ಯರು |
| 6. | ಶ್ರೀ ಸಿದ್ದಪ್ಪ ಭಂಡಾರಿ, ಕಲಮಲ, ರಾಯಚೂರು ಜಿಲ್ಲೆ | ಸದಸ್ಯರು |
| 7. | ಶ್ರೀ ವೀರನಗೌಡ ಪರಸರೆಡ್ಡಿ, ನಾಲವಾರ, ಚಿತ್ತಾಪುರ, ಕಲಬುರಗಿ ಜಿಲ್ಲೆ | ಸದಸ್ಯರು |
| 8. | ಡಾ. ಎಂ.ಜಿ. ಪಾಟೀಲ್, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ–ಕಾರ್ಯದರ್ಶಿ |

ಪ್ರಾರಂಭದಲ್ಲಿ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಸ್ವಾಗತ ಕೋರಿದರು.

ತದನಂತರ, ಕೊರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ಠರಾಯಿಸಲಾಯಿತು:

| | |
|---|---|
| ಐಟಂ–1 | ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 38ನೇ ಸಭೆಯ ಹಾಗೂ 39ನೇ ಮತ್ತು 40ನೇ (ವಿಶೇಷ) ಸಭೆಗಳ, ದಿನಾಂಕ 17–5–2019 ರ ಪರಿಚಲನಾ ಕಾರ್ಯಸೂಚಿಯ ನಡುವಳಿಗಳನ್ನು ಸ್ಥಿರೀಕರಿಸುವುದು.<br><br>ಠರಾವು:<br>ದಿನಾಂಕ 28–1–2019, 26–2–2019 ಹಾಗೂ 25–6–2019 ರಂದು ಕ್ರಮವಾಗಿ ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 38ನೇ ಸಭೆಯ ಹಾಗೂ 39ನೇ ಮತ್ತು 40ನೇ (ವಿಶೇಷ) ಸಭೆಗಳ, ದಿನಾಂಕ 17–5–2019ರ ಪರಿಚಲನಾ ಕಾರ್ಯಸೂಚಿಯ ನಡುವಳಿಗಳನ್ನು ಸ್ಥಿರೀಕರಿಸಲಾಯಿತು.<br>(ಕ್ರಮ : ಕುಲಸಚಿವರು) |
| ಐಟಂ–2 | ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 38ನೇ ಸಭೆಯ ಹಾಗೂ 39ನೇ ಮತ್ತು 40ನೇ (ವಿಶೇಷ) ಸಭೆಗಳ, ದಿನಾಂಕ 17–5–2019 ರ ಪರಿಚಲನಾ ಕಾರ್ಯಸೂಚಿಯ ನಡುವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳಿಗೆ ಅನುಮೋದನೆ ನೀಡುವುದು.<br><br>ಠರಾವು:<br>ದಿನಾಂಕ 28–1–2019, 26–2–2019 ಹಾಗೂ 25–6–2019 ರಂದು ಕ್ರಮವಾಗಿ ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 38ನೇ ಸಭೆಯ ಹಾಗೂ 39ನೇ ಮತ್ತು 40ನೇ (ವಿಶೇಷ) ಸಭೆಗಳ, ದಿನಾಂಕ 17–5–2019ರ ಪರಿಚಲನಾ ಕಾರ್ಯಸೂಚಿಯ ನಡುವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳನ್ನು ಸ್ಥಿರೀಕರಿಸಲಾಯಿತು.<br><br>ಆದಗ್ಯೂ, ಮಾನ್ಯ ವ್ಯವಸ್ಥಾಪನಾ ಮಂಡಳಿಯ 38ನೇ ಸಭೆಯ ಐಟಂ ಸಂಖ್ಯೆ 24ಕ್ಕೆ ಸಂಬಂಧಿಸಿದಂತೆ ಕೃಷಿ ವಿಜ್ಞಾನ ಕೇಂದ್ರ, ಕವಡಿಮಟ್ಟಿಯಲ್ಲಿ ಬಾನುಲಿ ಕೇಂದ್ರ ಸ್ಥಾಪಿಸುವ ಸಾಧ್ಯತೆಗಳ ಕುರಿತು ಸಲಹೆಯನ್ನು ನೀಡುವ ಸಲುವಾಗಿ ಮಂಡಳಿಯ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಿ, ಸಮಿತಿಯು ತಮಿಳುನಾಡಿನ ನಾಮಕಲ್ ಬಾನುಲಿ ಕೇಂದ್ರಕ್ಕೆ ಭೇಟಿ ನೀಡಲು ನಿರ್ಧರಿಸಲಾಯಿತು.<br>(ಕ್ರಮ : ಕುಲಸಚಿವರು) |

| | |
|---|---|
| ಐಟಂ–3 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಹೈದ್ರಾಬಾದ್–ಕರ್ನಾಟಕ ಹಿಂದುಳಿಕೆಯ ಸಹಾಯಕ ಪ್ರಾಧ್ಯಾಪಕರ ಮತ್ತು ಇತರೆ ತತ್ಸಮಾನ ಹುದ್ದೆಗಳಿಗೆ ನಡೆದ ನೇರ ನೇಮಕಾತಿಗೆ ಅನುಮೋದನೆ ಹಾಗೂ ಸಿ.ಎ.ಎಸ್. 2006 ಯೋಜನೆಯಡಿ ಶಿಕ್ಷಕರ / ವಿಜ್ಞಾನಿಗಳ ಪದೋನ್ನತಿಗೆ ಅನುಮೋದನೆ ನೀಡುವುದು**<br><br>**ಠರಾವು:**<br>ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ ವಿವಿಧ ಸಹಾಯಕ ಪ್ರಾಧ್ಯಾಪಕರ ಮತ್ತು ಇತರೆ ತತ್ಸಮಾನ ಹೈದ್ರಾಬಾದ್–ಕರ್ನಾಟಕ ಹಿಂದುಳಿಕೆಯ ಹುದ್ದೆಗಳಿಗೆ ಜಾಹೀರಾತು ಅಧಿಸೂಚನೆ ಸಂ. R/UASR/Rectt./Advt.14/970/2018-19 dated 5-3-2019 ರ ಅನುಸಾರ ನೇರ ನೇಮಕಾತಿ ಅಡಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಮಂಡಳಿಯು ಪರಿಶೀಲಿಸಿ, ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಗೆ ಅನುಮೋದನೆ ನೀಡಿತು. ಮುಂದುವರೆದು, ವ್ಯವಸ್ಥಾಪನಾ ಮಂಡಳಿಯ ಸಭೆಯ ನಡವಳಿಗಳ ಸ್ಥಿರೀಕರಣಕ್ಕಾಗಿ ನಿರೀಕ್ಷಿಸದೇ, ಆಯ್ಕೆಯಾದ ಅಭ್ಯರ್ಥಿಗಳಿಗೆ ಆಯ್ಕೆ ಪಟ್ಟಿ ಅನುಸಾರ ನೇಮಕಾತಿ ಆದೇಶ ಹೊರಡಿಸಲು ಸಹ ಠರಾಯಿಸಲಾಯಿತು.<br><br>ಮುಂದುವರೆದು, ಕೃವಿವಿ ಆದೇಶ ಸಂ. ಕುಸ/ಕೃವಿವಿರಾ/ವ್ಯೆ.ಮಂ.ಸಭೆ–38/2018–19 ದಿನಾಂಕ 24–6–2019 ರನ್ವಯ ಸಿ.ಎ.ಎಸ್.–2006 ಅಡಿ ಎ.ಜಿ.ಪಿ. ರೂ. 6000 ರಿಂದ 7000 ಕ್ಕೆ (22 ಶಿಕ್ಷಕರುಗಳಿಗೆ), ಎ.ಜಿ.ಪಿ. ರೂ. 7000 ರಿಂದ 8000 ಕ್ಕೆ (34 ಶಿಕ್ಷಕರುಗಳಿಗೆ), ಎ.ಜಿ.ಪಿ. ರೂ. 8000 ರಿಂದ 9000 ಕ್ಕೆ (19 ಶಿಕ್ಷಕರುಗಳಿಗೆ) ಹಾಗೂ ಎ.ಜಿ.ಪಿ. ರೂ. 9000 ರಿಂದ 10000 ಕ್ಕೆ (02 ಶಿಕ್ಷಕರಿಗೆ) ಯಾದಿಯಲ್ಲಿ ನಮೂದಿಸಿರುವಂತೆ ಅರ್ಹ ಶಿಕ್ಷಕರುಗಳಿಗೆ ಅವರುಗಳು ಅರ್ಹತೆ ಹೊಂದಿದ ದಿನಾಂಕದಿಂದ ಅನ್ವಯವಾಗುವಂತೆ ಸಭೆಯ ನಡವಳಿಗಳ ಸ್ಥಿರೀಕರಣಕ್ಕೆ ನಿರೀಕ್ಷಿಸದೇ ಮುಂಬಡ್ತಿ ಆದೇಶಗಳನ್ನು ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>ಹಾಗೆಯೇ, ಯು.ಜಿ.ಸಿ. ಯ ದಿನಾಂಕ 16–10–2018 ರ ಸಾರ್ವಜನಿಕ ನೋಟೀಸ್ ಸಂ.2 ((16-002-ps)-Pt-Fi-II) ರಲ್ಲಿ ನಿಗದಿತ ಅವಧಿಯಲ್ಲಿ ಕನಿಷ್ಠ ತರಬೇತಿಗಳನ್ನು ಪಡೆದಿರಬೇಕಾದ ವಿಷಯಕ್ಕೆ ವಿನಾಯತಿ ನೀಡಿದ್ದರಿಂದ **ಡಾ॥ ವಿಕ್ರಮ್** ಸಿಂಹ ಹಾಗೂ **ಡಾ॥ ಜ್ಯೋತಿ ಆರ್** ಇವರುಗಳ ಅರ್ಹತಾ ದಿನಾಂಕಗಳನ್ನು ಪರಿಗಣಿಸಿ ಪದೋನ್ನತಿ ನೀಡಲು ಮಂಡಳಿಯು ನಿರ್ಧರಿಸಿತು.<br><br>(ಕ್ರಮ : ಕುಲಸಚಿವರು) |
| ಐಟಂ–4 | **ಡಾ. ಎಂ.ಎನ್. ಶೀಲವಂತರ್ ಸಮಿತಿಯ ವರದಿಯನ್ನು (ಪ್ರಮುಖ ಅಂಶಗಳು) ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅವಗಾಹನೆಗೆ ಸಲ್ಲಿಸುವ ಕುರಿತು.**<br><br>**ಠರಾವು:**<br>ಡಾ. ಎಂ.ಎನ್. ಶೀಲವಂತರ್ ಸಮಿತಿಯ ವರದಿಯನ್ನು (ಪ್ರಮುಖ ಅಂಶಗಳು) ಮಂಡಳಿಯು ಕೂಲಂಕಷವಾಗಿ ಪರಿಶೀಲಿಸಲಾಗಿ, ನೇಮಕಾತಿಯಲ್ಲಿ ನಡೆದ ಲೋಪದೋಷಗಳನ್ನು ಗಂಭೀರವಾಗಿ ಪರಿಗಣಿಸಿ, ನಿಯಮಗಳ ಉಲ್ಲಂಘನೆಯಾಗಿರುವ ಪ್ರಶ್ನಿತ ನೇಮಕಾತಿಗಳಿಗೆ ಕಾರಣರಾದ ಸಂಬಂಧಪಟ್ಟ ಆಗಿನ ನೇಮಕಾತಿ ಸಮಿತಿಯ ಅಧ್ಯಕ್ಷರನ್ನೊಳಗೊಂಡ ಇತರೆ ಸದಸ್ಯರುಗಳ ವಿವರಣೆ ಪಡೆದು ಕೂಡಲೇ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಮಂಡಳಿಯು ಸಲಹೆ ನೀಡಿತು.<br><br>ಈ ವಿಷಯದ ಕುರಿತು ಡಾ. ಶಿವರಾಜ್ ಪಾಟೀಲ್ ಹಾಗೂ ಡಾ. ಎಂ. ಶೇಖರಗೌಡ, ಮಾನ್ಯ ಸದಸ್ಯರು ಆಗಿನ ನೇಮಕಾತಿ ಸಮಿತಿಯ ಅಧ್ಯಕ್ಷರಾದ ಡಾ. ಪಿ.ಎಂ. ಸಾಲಿಮಠ ಇವರ ಮೇಲೆ ಸೂಕ್ತ ಶಿಸ್ತಿನ ಕ್ರಮಕೈಗೊಳ್ಳುವಂತೆ ಸರಕಾರಕ್ಕೆ ಶಿಫಾರಸ್ಸು ಮಾಡಲು ತಿಳಿಸಿದರು.<br><br>(ಕ್ರಮ : ಕುಲಸಚಿವರು) |
| ಐಟಂ–5 | **ಕೃವಿವಿ., ಸಿಬ್ಬಂದಿಯವರ ರೂ. 25,000/– ಕ್ಕಿಂತ ಹೆಚ್ಚಿನ ಮೊತ್ತದ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಗೆ ಅನುಮೋದನೆ ನೀಡುವ ಕುರಿತು.** |

ಠರಾವು:

ಚರ್ಚೆಯ ನಂತರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ರಾಯಚೂರು ಅವರು ಪರಿಶೀಲಿಸಿ ಮೇಲುರುಜು ಮಾಡಿದಂತೆ ವೈದ್ಯಕೀಯ ವೆಚ್ಚದ ಮರುಪಾವತಿಗಾಗಿ ಮಂಡಳಿಯು ಈ ಕೆಳಗಿನಂತೆ ಅನುಮೋದನೆ ನೀಡಿತು.

| ಕ್ರ. ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಮರು – ಪಾವತಿಸಬೇಕಾದ ಮೊತ್ತ (ರೂ.) |
|---|---|---|
| 1 | ಶ್ರೀ. ಸಿ.ಯು. ಕೊಟಬಾಗಿ<br>ಸಹಾಯಕ ನಿಯಂತ್ರಣಾಧಿಕಾರಿಗಳು,<br>ಕುಲಸಚಿವರು ಕಛೇರಿ ಕೃವಿವಿ., ರಾಯಚೂರು | 52,340.00 |
| 2 | ಶ್ರೀ. ಖಾಸಿಂ ಅಲಿ,<br>ಹಿರಿಯ ಟ್ರ್ಯಾಕ್ಟರ್ ಚಾಲಕರು,<br>ಕೃಷಿ ಮಹಾವಿದ್ಯಾಲಯ ರಾಯಚೂರು | 56,427.00 |
| 3 | ಶ್ರೀಮತಿ. ನರಸಮ್ಮ ಶಂಕ್ರಪ್ಪ<br>ಕೃಷಿ ಕಾರ್ಮಿಕರು, ಮು.ಕೃಸಂ.ಕೇಂದ್ರ, ರಾಯಚೂರು. | 40,377.00 |
| 4 | ಶ್ರೀ. ವಿಶ್ವನಾಥ ಹೂಗಾರ<br>ಹಿರಿಯ ಸಹಾಯಕರು, ಕೃಷಿ ಮಹಾವಿದ್ಯಾಲಯ, ರಾಯಚೂರು. | 35,443.00 |
| 5* | ಶ್ರೀ. ಅಶೋಕ ಅಕ್ಕಸಾಲಿ<br>ಸಹಾಯಕರು, ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ. | 1,66,063.00 |
| 6* | ಡಾ॥ ಬಿ.ಮಹೇಶ್ವರ ಬಾಬು<br>ಪ್ರಾಧ್ಯಾಪಕರು/ಮುಖ್ಯಸ್ಥರು<br>ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು. | 2,28,957.00 |
| 7* | ಶ್ರೀಮತಿ. ಮಂಜುಳಾ ಎಂ. ಹಳಕಟ್ಟಿ<br>ಹಿರಿಯ ಸಹಾಯಕರು, ಕೃಷಿ ವಿಜ್ಞಾನ ಕೇಂದ್ರ ಗಂಗಾವತಿ | 37,700.00 |
| * ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ರಾಯಚೂರು ಇವರ ಮೇಲುರುಜುಗಾಗಿ ಸಲ್ಲಿಸಲಾಗಿದೆ. | | |

ಈ ಕೆಳಕಂಡ ಸಿಬ್ಬಂದಿಯವರು ಸರಕಾರ / ಕೃವಿವಿ.,ದಿಂದ ಮಾನ್ಯತೆ ಪಡೆಯದ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆ ಪಡೆದು ಸಲ್ಲಿಸಲಾದ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಡಿ.ಹೆಚ್.ಓ.ರವರ ಮೇಲುರುಜುಗಾಗಿ ಕಳುಹಿಸಲು ಮತ್ತು ಮೇಲುರುಜುಗೊಂಡ ಮೊತ್ತದ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ತನ್ನ ಅನುಮೋದನೆ ನೀಡಿತು :

| ಕ್ರ.. ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಕ್ಲೇಮು ಮಾಡಿದ ಮೊತ್ತ (ರೂ.) |
|---|---|---|
| 1 | ಶ್ರೀ.ಎ.ವಿ. ಕರೇಗೌಡರ<br>ವಿಜ್ಞಾನಿ, ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ. | 62,970.00 |
| 2 | ಶ್ರೀ. ಗುರುರಾಜ<br>ಲಘುವಾಹನ ಚಾಲಕರು,<br>ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರು. | 15,000.00 |
| 3 | ಡಾ. ಮಲ್ಲೇಶ್ ಎಸ್.ಬಿ, (ಲೇಟ್)<br>ಸಹಾಯಕ ಪ್ರಾಧ್ಯಪಕರು, ಕೃಷಿ ಸಂಶೋಧನಾ ಕೇಂದ್ರ, ಹಗರಿ | 70,823.00 |
| 4 | ಶ್ರೀ. ರೇಣುಕಾಪ್ರಸಾದ್, ಬಿ.ಎಸ್.,<br>ಸಹಾಯಕರು, ಸಂಶೋಧನಾ ನಿರ್ದೇಶನಾಲಯ<br>ಕೃವಿವಿ., ರಾಯಚೂರು. | 40,374.00 |
| 5 | ಡಾ॥ ರಾಜಣ್ಣ<br>ಪ್ರಾಧ್ಯಪಕರು ಉಪ–ನಿರ್ದೇಶಕರು<br>ಕೃಷಿ ಮಹಾವಿದ್ಯಾಲಯ ರಾಯಚೂರು. | 78,434.00 |

| | | | |
|---|---|---|---|
| | 6 | ಡಾ|| ವಿಶ್ವನಾಥ,<br>ಸಹಾಯಕ ಪ್ರಾಧ್ಯಪಕರು,<br>ಕೃಷಿ ಮಹಾವಿದ್ಯಾಲಯ ರಾಯಚೂರು. | 33,985.00 |
| | 7 | ಶ್ರೀ. ಶಂಶುದ್ದೀನ್<br>ಪ್ರಯೋಗ ಶಾಲಾ ಸಹಾಯಕರು,<br>ಮು.ಕೃಸಂ.ಕೇಂದ್ರ. ರಾಯಚೂರು. | 30,976.00 |
| | 8 | ಶ್ರೀಮತಿ. ಮುದ್ದಮ್ಮ<br>ಕೃಷಿ ಕಾರ್ಮಿಕರು, ಮು.ಕೃಸಂ.ಕೇಂದ್ರ, ರಾಯಚೂರು. | 15,196.00 |
| | 9 | ಶ್ರೀ. ಬಸವರಾಜ<br>ಹಿರಿಯ ಸಹಾಯಕರು<br>ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ | 44,032.00 |
| | 10 | ಶ್ರೀಮತಿ. ಮಾರಕ್ಕ ಓಬಯ್ಯ<br>ಕೃಷಿ ಕಾರ್ಮಿಕಳು, ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ. | 26,689.00 |
| | 11 | ಶ್ರೀ. ಶಂಕರಪ್ಪ ತಂದೆ ರಾಚಣ್ಣ<br>ಸಹಾಯಕ ಕುಕ್–ಕಮ್ ಕೇರಟೇಕರ್<br>ಆಸ್ತಿ ವಿಭಾಗ ಕೃವಿವಿ., ರಾಯಚೂರು. | 23,542.00 |
| | 12 | ಶ್ರೀ.ಸಿದ್ದರಾಮ<br>ಕ್ಷೇತ್ರ ಅಧೀಕ್ಷಕರು, ಕೃಷಿ ಸಂಶೋಧನಾ ಕೇಂದ್ರ, ಮಾಳನೂರು. | 12,500.00 |
| | 13 | ಡಾ|| ಬಸವಣ್ಣೆಪ್ಪ ಎಂ. ಎ.<br>ಪ್ರಾಧ್ಯಾಪಕರು, ಕೃಷಿ ಸಂಶೋಧನಾ ಕೇಂದ್ರ, ಸಿರುಗುಪ್ಪ. | 13,270.00 |
| | 14 | ಶ್ರೀ. ಮಹೇಶ<br>ಕ್ಷೇತ್ರ ಸಹಾಯಕರು<br>ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು | 7,900.00 |
| | 15 | ಶ್ರೀಮತಿ. ಶಾಲಂಬಿ ಮೊಹಮ್ಮದ್ ಹುಸೇನ್<br>ಕೃಷಿ ಕರ್ಮಿಕರು, ಮು.ಕೃಸಂ.ಕೇಂದ್ರ, ರಾಯಚೂರು. | 18,012.00 |
| | 16 | ಶ್ರೀ. ಸಂತೋಷ ಕುಮಾರ<br>ಹಿರಿಯ ಸಹಾಯಕರು<br>ಹಣಕಾಸು ನಿಯಂತ್ರಣಾಧಿಕಾರಿಗಳು ಕಛೇರಿ<br>ಕೃಷಿ ವಿಶ್ವವಿದ್ಯಾಲಯ ರಾಯಚೂರು. | 50,166.00 |
| | 17 | ಶ್ರೀ. ಪ್ರಭಣ್ಣ ಪಾಟೀಲ<br>ಹಿರಿಯ ಸಹಾಯಕರು,ಹಣಕಾಸು ನಿಯಂತ್ರಣಾಧಿಕಾರಿಗಳು<br>ಕಛೇರಿ, ಕೃಷಿ ವಿಶ್ವವಿದ್ಯಾಲಯ ರಾಯಚೂರು. | 27,531.00 |
| | 18 | ಶ್ರೀ. ಮುನಿಸ್ವಾಮಿ<br>ಹಿರಿಯ ಸಹಾಯಕರು, ಹಣಕಾಸು ನಿಯಂತ್ರಣಾಧಿಕಾರಿಗಳು<br>ಕಛೇರಿ, ಕೃಷಿ ವಿಶ್ವವಿದ್ಯಾಲಯ ರಾಯಚೂರು. | 52,947.00 |
| | 19 | ಶ್ರೀ. ಪರುಶುರಾಮ.ಕೆ<br>ಹಿರಿಯ ಕೃಷಿ ಕಾರ್ಮಿಕ, ಕೃಷಿ ಸಂಶೋಧನಾ ಕೇಂದ್ರ<br>ಸಿರುಗುಪ್ಪ | 36,620.00 |
| | 20 | ಶ್ರೀ. ಶಂಶುದ್ದೀನ್<br>ಪ್ರಯೋಗ ಶಾಲಾ ಸಹಾಯಕರು<br>ಮು.ಕೃಸಂ.ಕೇಂದ್ರ. ರಾಯಚೂರು. | 21,243.00 |
| | 21 | ಶ್ರೀ. ವಿಶ್ವನಾಥ ಹೂಗಾರ<br>ಹಿರಿಯ ಸಹಾಯಕರು<br>ಕೃಷಿ ಮಹಾವಿದ್ಯಾಲಯ ರಾಯಚೂರು | 12,806.00<br>19,878.00<br>19,840.00 |
| | 22 | ಶ್ರೀ. ಅಶೋಕ ಕುಮಾರ್ ಗಡ್ಡಿ<br>ವಿಜ್ಞಾನಿ, ಕೃಷಿ ಸಂಶೋಧನಾ ಕೇಂದ್ರ, ಸಿರುಗುಪ್ಪ. | 25,313.00 |

| | |
|---|---|
| | ಮುಂದುವರೆದು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಸಿಬ್ಬಂದಿಯವರು ರೂ. 25,000/– ಗಿಂತ ಹೆಚ್ಚಿನ ಮೊತ್ತದ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಗಾಗಿ ಸಲ್ಲಿಸಲಾದ ಕ್ಲೇಮುಗಳನ್ನು ಹಾಗೂ ತುರ್ತು ಸಂದರ್ಭಗಳಲ್ಲಿ ಸರಕಾರ / ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆಯದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು ಮರು ಪಾವತಿಗಾಗಿ ಸಲ್ಲಿಸಲಾದ ಕ್ಲೇಮುಗಳಿಗೆ ಸಂಬಂಧಿಸಿದ ದಿನಾಂಕ 25–2–2016 ರ ಸುತ್ತೋಲೆಯನ್ನು ಪರಿಷ್ಕರಿಸುವುದನ್ನು ಮಂಡಳಿಯು ಪರಿಗಣಿಸಿ, ಇನ್ನುಮುಂದೆ ರೂ. 1,00,000/–ವರೆಗಿನ ಕ್ಲೇಮುಗಳನ್ನು ಮಾನ್ಯ ಕುಲಪತಿಗಳ ಹಂತದಲ್ಲಿಯೇ ಮರುಪಾವತಿಗಾಗಿ ಅನುಮೋದನೆ ನೀಡಲು ಮಂಡಳಿಯು ನಿರ್ಣಯಿಸಿತು.<br>(ಕ್ರಮ: ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು) |
| ಐಟಂ–6 | ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಪೀಠದ ತೀರ್ಪಿನನ್ವಯ ಬೆರಳಚ್ಚುಗಾರರ / ಡಾ. ರಾಜಾ, ಸಹಾಯಕ ಪ್ರಾಧ್ಯಾಪಕ (ಸಸ್ಯರೋಗ ಶಾಸ್ತ್ರ) / ಡಾ. ನೇಹಾ ಕುಲ್ಕರ್ಣಿ, ಸಹಾಯಕ ಪ್ರಾಧ್ಯಾಪಕಿ (ಆಹಾರ ಮತ್ತು ಸಂಸ್ಕರಣ ತಂತ್ರಜ್ಞಾನ) ಹುದ್ದೆಗಳ ನೇಮಕಾತಿ ವಿವರಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅವಗಾಹನೆಗೆ ಸಲ್ಲಿಸುವ ಕುರಿತು.<br><br>ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಬೆರಳಚ್ಚುಗಾರರ–ಕಂಪ್ಯೂಟರ್ ಆಪರೇಟರ್ ಹುದ್ದೆಯ ನೇಮಕಾತಿಯ ರಿಡೂ (Re-Do) ಪ್ರಕ್ರಿಯೆ ಕೈಗೊಳ್ಳಲು ಹಾಗೂ ಡಾ. ರಾಜಾ, ಸಹಾಯಕ ಪ್ರಾಧ್ಯಾಪಕ (ಸಸ್ಯರೋಗ ಶಾಸ್ತ್ರ) ಇವರ ದಿನಾಂಕ 12–12–2017 ರ ಅರ್ಜಿಯನ್ನು ಪರಿಶೀಲಿಸಲು ಸಮಿತಿಯನ್ನು ರಚಿಸಿ, ಕ್ರಮಕೈಗೊಳ್ಳಲಾಗುತ್ತಿದೆ. ಅಲ್ಲದೇ, ಡಾ. ನೇಹಾ ಕುಲ್ಕರ್ಣಿ, ಸಹಾಯಕ ಪ್ರಾಧ್ಯಾಪಕಿ (ಆಹಾರ ಮತ್ತು ಸಂಸ್ಕರಣ ತಂತ್ರಜ್ಞಾನ) ಇವರ ರಿಟ್ ಅರ್ಜಿಯು ವಜಾಗೊಂಡಿರುತ್ತದೆ ಎಂದು ಸಭೆಯ ಗಮನಕ್ಕೆ ತರಲಾಯಿತು.<br><br>**ಠರಾವು:**<br>ಮಾನ್ಯ ವ್ಯವಸ್ಥಾಪನಾ ಮಂಡಳಿಯು ವಿವಿಧ ಹುದ್ದೆಗಳ ನೇಮಕಾತಿ ಪ್ರಕರಣಕ್ಕೆ ಸಂಬಂಧಿಸಿದ ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಪೀಠದ ತೀರ್ಪುಗಳನ್ವಯ ಸೂಕ್ತ ಕ್ರಮಕೈಗೊಳ್ಳಲು ಮಂಡಳಿಯು ಸಲಹೆ ನೀಡಿತು.<br>(ಕ್ರಮ : ಕುಲಸಚಿವರು) |
| ಐಟಂ–7 | **ಶೀಘ್ರಲಿಪಿಗಾರರನ್ನು ಅಧೀಕ್ಷಕ (ಸಾಮಾನ್ಯ) ಹುದ್ದೆಗೆ ಮುಂಬಡ್ತಿಗಾಗಿ ಪರಿಗಣಿಸುವ ಹಾಗೂ ಕಾರ್ಯದರ್ಶಿ / ಆಪ್ತ ಕಾರ್ಯದರ್ಶಿ ಹುದ್ದೆಗಳನ್ನು ಸಹಾಯಕ ಆಡಳಿತಾಧಿಕಾರಿ/ ಸಹಾಯಕ ಕುಲಸಚಿವ / ಅಧೀಕ್ಷಕ (ಸಾಮಾನ್ಯ) ಹುದ್ದೆಗಳಲ್ಲಿ ವಿಲೀನಗೊಳಿಸುವ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ಮಂಡಳಿಯು ಶೀಘ್ರಲಿಪಿಗಾರರನ್ನು ಅಧೀಕ್ಷಕ (ಸಾಮಾನ್ಯ) ಹುದ್ದೆಗೆ ಮುಂಬಡ್ತಿಗಾಗಿ ಪರಿಗಣಿಸುವ ಹಾಗೂ ಕಾರ್ಯದರ್ಶಿ / ಸಹಾಯಕ ಕುಲಸಚಿವ / ಆಪ್ತ ಕಾರ್ಯದರ್ಶಿ ಹುದ್ದೆಗಳನ್ನು ಕ್ರಮವಾಗಿ ಸಹಾಯಕ ಆಡಳಿತಾಧಿಕಾರಿ / ಅಧೀಕ್ಷಕ (ಸಾಮಾನ್ಯ) ಹುದ್ದೆಗಳಲ್ಲಿ ವಿಲೀನಗೊಳಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಲಾಯಿತು. ಮುಂದುವರೆದು, ಕಾರ್ಯದರ್ಶಿಗಳ 3 ಹೆಚ್ಚುವರಿ ಹುದ್ದೆಗಳನ್ನು ಸಂಖ್ಯಾತಿರಿಕ್ತ ಹುದ್ದೆಗಳಿಗಾಗಿ ಪರಿವರ್ತಿಸಲು ಸರಕಾರದ ಪರಿಗಣನೆಗಾಗಿ ಪ್ರಸ್ತಾವನೆ ಸಲ್ಲಿಸಲು ಸಭೆಯು ನಿರ್ಧರಿಸಿತು.<br><br>ಹಾಗೆಯೇ ವಿಲೀನ ಪ್ರಕ್ರಿಯೆಯ ನಂತರ, ಶ್ರೀ ಮಹೆಬೂಬ್ ಅಲಿ, ಕಾರ್ಯದರ್ಶಿ, ಕುಲಸಚಿವರ ಕಾರ್ಯಾಲಯ, ಕೃವಿವಿ., ರಾಯಚೂರು ಇವರನ್ನು ಗಂಗಾವತಿ / ಹಗರಿ ಕೃಷಿ ಸಂಶೋಧನಾ ಕೇಂದ್ರಕ್ಕೆ ಹುದ್ದೆ ಸಮೇತ ವರ್ಗಾಯಿಸಲು ಸಹ ನಿರ್ಧರಿಸಲಾಯಿತು.<br><br>(ಕ್ರಮ : ಕುಲಸಚಿವರು) |
| ಐಟಂ–8 | ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.<br><br>**ಠರಾವು:** |

ರೂ. 10.00 ಲಕ್ಷ ಅಧಿಕದ ಈ ಕೆಳಕಂಡ ಹೊಸ ಸಿವಿಲ್ ಕಾಮಾಗಾರಿಗಳನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ದೃಷ್ಟಿಯ ಹಿನ್ನೆಲೆಯಲ್ಲಿ ಕೃವಿವಿ., ರಾಯಚೂರಿನ ಮುಖ್ಯ ಆವರಣ ಹಾಗು ವಿವಿಧ ಆವರಣಗಳಲ್ಲಿ ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು :

| ಕ್ರಮ. ಸಂ. | ಸಿವಿಲ್ ಕಾಮಗಾರಿಯ ವಿವರ | ಅಂದಾಜು ಬೆಲೆ (ರೂ. ಲಕ್ಷಗಳಲ್ಲಿ) | ಅನುದಾನ ವಿವರ |
|---|---|---|---|
| | ಕೃವಿ.ವಿ. ರಾಯಚೂರು ಆವರಣ | | |
| 1 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ಆವರಣದಲ್ಲಿ ಬೀಜ ಉಗ್ರಾಣವನ್ನು ನಿರ್ಮಿಸುವ ಕೆಲಸ. | 29.69 | Seed-hub project (Soyabean) |
| 2 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ಆವರಣದಲ್ಲಿ ಬೀಜ ಘಟಕದ ಎದುರುಗಡೆ ಸಿ.ಸಿ. ರೋಡ್ ಮತ್ತು ರಸ್ತೆ ಬದಿಯ ಚರಂಡಿ ನಿರ್ಮಿಸುವ ಕೆಲಸ. | 53.68 | ಕೃವಿ.ವಿ. ಅನುದಾನ |
| 3 | ಮುಖ್ಯ ಆವರಣದ ಗ್ರಂಥಾಲಯದ ಕೇಂದ್ರ ಭಾಗದಲ್ಲಿ False Ceiling ಅಳವಡಿಸುವ ಮತ್ತು ಇತರೆ ಕೆಲಸ. | 11.20 | ಕೃವಿ.ವಿ. ಅನುದಾನ |
| 4 | ಕೃತಾಂ.ಮಹಾವಿದ್ಯಾಲಯದ ಎದುರುಗಡೆ W.B.M. ರಸ್ತೆಯನ್ನು ನಿರ್ಮಿಸುವ ಕೆಲಸ. | 11.41 | ಕೃವಿ.ವಿ. ಅನುದಾನ |
| 5 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ಆವರಣದಲ್ಲಿ ವಿದ್ಯಾರ್ಥಿನಿಯರ ವಸತಿ ನಿಲಯ (50 capacity) ನಿರ್ಮಿಸುವ ಕೆಲಸ. | 250.00 | ಎಸ್‌ಸಿಪಿ/ ಟಿಎಸ್‌ಪಿ ಅನುದಾನ |
| 6 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ಆವರಣದ ಹೊಸ ಏರಿಯಾದ ಮುಖ್ಯ ರಸ್ತೆಯ ಡಾಂಬರೀಕರಣ ಕೆಲಸ | 28.20 | ಕೃವಿ.ವಿ. ಅನುದಾನ |
| | ಕೃ. ಮ.ವಿ. ಕಲಬುರಗಿ. | | |
| 7 | ಕೃಷಿ ಮಹಾವಿದ್ಯಾಲಯ ಕಲಬುರಗಿಯ ವಿದ್ಯಾರ್ಥಿಗಳ ವಸತಿ ನಿಲಯ ಮತ್ತು ಗ್ರಂಥಾಲಯ ಕಟ್ಟಡದ ಛಾವಣಿಯ ಜಲನಿರೋಧಕ ಕೆಲಸ. | 19.50 | ಕೃವಿ.ವಿ. ಅನುದಾನ |
| | ಕೃಸಂ.ಕೇಂದ್ರ ಬೀದರ್. | | |
| 8 | ಕೃಷಿ ಸಂಶೋಧನಾ ಕೇಂದ್ರ ಬೀದರ್‌ನಲ್ಲಿ ನವಾಬ ಕಟ್ಟಡದ ದುರಸ್ತಿ ಮತ್ತು ನವೀಕರಣಗೊಳಿಸುವ ಕೆಲಸ. | 14.53 | ಕೃವಿ.ವಿ. ಅನುದಾನ |

ಮುಂದುವರೆದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವ್ಯವಸ್ಥಾಪನಾ ಮಂಡಳಿಯ ಮುಂದಿನ ಸಭೆಗಳಲ್ಲಿ ಹೊಸ ಸಿವಿಲ್ ಕಾಮಗಾರಿಗಳ ಸಂಪೂರ್ಣ ವಿವರಗಳೊಂದಿಗೆ (ಅಂದಾಜು ಪಟ್ಟಿ, ನಕ್ಷೆ) ಪವರ್‌ಪಾಯಿಂಟ್ ಮುಖಾಂತರ ಮಂಡಿಸಲು ಆಸ್ತಿ ಅಧಿಕಾರಿಯವರಿಗೆ ಸೂಚಿಸಲು ನಿರ್ಧರಿಸಲಾಯಿತು.

(ಕ್ರಮ : ಕುಲಸಚಿವರು / ಆಸ್ತಿ ಅಧಿಕಾರಿ)

## ಹೆಚ್ಚುವರಿ ಕಾರ್ಯಸೂಚಿ ವಿಷಯಗಳು.

**ಐಟಂ–1** ಕೃವಿವಿ., ರಾಯಚೂರಿನ ಮುಖ್ಯ ಆವರಣ ಮತ್ತು ಕಲಬುರಗಿ ಆವರಣದಲ್ಲಿಯ ಅನುಪಯುಕ್ತ ವಾಹನಗಳನ್ನು ವಿಲೇವಾರಿ ಮಾಡಲು ಅನುಮೋದನೆ ಕುರಿತು.

ಠರಾವು:

ಚರ್ಚೆಯ ನಂತರ, ಕೃವಿವಿ., ರಾಯಚೂರಿನ ಮುಖ್ಯ ಆವರಣ ಮತ್ತು ಕಲಬುರಗಿ ಆವರಣದಲ್ಲಿಯ ಅನುಪಯುಕ್ತ ವಾಹನಗಳನ್ನು ನಿಯಮಾನುಸಾರ ವಿಲೇವಾರಿ ಮಾಡುವ ಪ್ರಸ್ತಾವನೆಗೆ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

**ಐಟಂ–2** ಶ್ರೀಮತಿ ರತ್ನಮ್ಮ, ಸಹಾಯಕರು ಇವರಿಗೆ ಕೃಷಿ ಸಚಿವಾಲಯಕ್ಕೆ ನಿಯೋಜಿಸಿರುವ ಅವಧಿಯನ್ನು ವಿಸ್ತರಿಸಲು ಅನುಮೋದನೆ ಕುರಿತು.

| | |
|---|---|
| | **ಠರಾವು:**<br>ಚರ್ಚೆಯ ನಂತರ, ಶ್ರೀಮತಿ ರತ್ನಮ್ಮ, ಸಹಾಯಕರು ಇವರ ಅನ್ಯ ಕರ್ತವ್ಯದ ನಿಮಿತ್ತ (ಒಒಡಿ) ಕೃಷಿ ಸಚಿವಾಲಯಕ್ಕೆ ನಿಯೋಜಿಸಿರುವ ಅವಧಿಯನ್ನು ದಿನಾಂಕ 20–7–2021 ರವರೆಗೆ ವಿಸ್ತರಿಸುವ ಪ್ರಸ್ತಾವನೆಗೆ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಿತು.<br>(ಕ್ರಮ : ಆಡಳಿತಾಧಿಕಾರಿಗಳು) |
| ಐಟಂ–3 | **ಕೃವಿವಿ., ರಾಯಚೂರಿನ ಪೀಡೆನಾಶಕಗಳ ಅವಶೇಷ ಮತ್ತು ಆಹಾರ ಗುಣ ವಿಶ್ಲೇಷಣೆ ಪ್ರಯೋಗಾಲಯದ LC-MS/MS (8040) ಉಪಕರಣದ ಸಮಗ್ರ ನಿರ್ವಹಣೆ ಒಪ್ಪಂದ (CMC) ಕ್ಕಾಗಿ ಅನುಮೋದನೆ ಕುರಿತು.**<br>**ಠರಾವು:**<br>ಸುದೀರ್ಘ ಚರ್ಚೆಯ ನಂತರ, ಕೃವಿವಿ., ರಾಯಚೂರಿನ ಪೀಡೆನಾಶಕಗಳ ಅವಶೇಷ ಮತ್ತು ಆಹಾರ ಗುಣ ವಿಶ್ಲೇಷಣೆ ಪ್ರಯೋಗಾಲಯದ LC-MS/MS (8040) ಉಪಕರಣದ ಸಮಗ್ರ ನಿರ್ವಹಣೆ ಒಪ್ಪಂದ (CMC) ವನ್ನು ಸ್ಪಿಂಕೋಟೆಕ್ ಪ್ರೈವೇಟ್ ಲಿಮಿಟೆಡ್, ಚೆನ್ನೈ ಇವರಿಂದ ರೂ. 18.88 ಲಕ್ಷಗಳಲ್ಲಿ (ಜಿ.ಎಸ್.ಟಿ. ಸಮೇತ) 5 ವರ್ಷಗಳವರೆಗೆ ಮಾಡಿಕೊಳ್ಳಲು ಹಾಗೂ ಒಪ್ಪಂದ ಮುಗಿದ ನಂತರದ ಮುಂದಿನ 5 ವರ್ಷಗಳ ಅವಧಿಯವರೆಗೂ ಸಹ ಅದೇ ದರದಲ್ಲಿ ಸಮಗ್ರ ನಿರ್ವಹಣೆ ಒಪ್ಪಂದ (CMC) ವನ್ನು ಮಾಡಿಕೊಳ್ಳಲು ಮಂಡಳಿಯು ಅನುಮೋದನೆ ನೀಡಿತು.<br>(ಕ್ರಮ : ಕುಲಸಚಿವರು) |
| ಐಟಂ–4 | **ಹೊಸದಾಗಿ ನಾಲವಾರ ಮತ್ತು ದೇವದುರ್ಗದಲ್ಲಿ ಕೃಷಿ ವಿಸ್ತರಣಾ ಶಿಕ್ಷಣಾ ಕೇಂದ್ರಗಳನ್ನು ಸ್ಥಾಪಿಸುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ವ್ಯಾಪ್ತಿಯಲ್ಲಿಯ ನಾಲವಾರ ಮತ್ತು ದೇವದುರ್ಗದಲ್ಲಿ ಹೊಸದಾಗಿ ಕೃಷಿ ವಿಸ್ತರಣಾ ಶಿಕ್ಷಣಾ ಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾವನೆಗೆ ಮಂಡಳಿಯು ಅನುಮೋದನೆ ನೀಡಿತು. ಅಲ್ಲದೇ, ಹೊಸದಾಗಿ ಸ್ಥಾಪಿಸಲಾಗುವ ಕೃಷಿ ವಿಸ್ತರಣಾ ಶಿಕ್ಷಣಾ ಕೇಂದ್ರಗಳಿಗೆ ಅವಶ್ಯಕವಾಗಿ ಬೇಕಾಗುವ ಶಿಕ್ಷಕ / ಶಿಕ್ಷಕೇತರ ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಮಂಡಳಿಯು ನಿರ್ಧರಿಸಿತು. (ಕ್ರಮ : ಕುಲಸಚಿವರು) |
| ಐಟಂ–5 | **ಹೊರದೇಶಗಳಲ್ಲಿ ಜರುಗುವ ಅಂತರ ರಾಷ್ಟ್ರೀಯ ವಿಚಾರ ಸಂಕೀರ್ಣ / ಕಾರ್ಯಾಗಾರ / ಸಮ್ಮೇಳನ ಇತ್ಯಾದಿಗಳಲ್ಲಿ ಭಾಗವಹಿಸುವ ಕೃವಿವಿ., ರಾಯಚೂರಿನ ಶಿಕ್ಷಕರು / ವಿಜ್ಞಾನಿಗಳವರಿಗೆ ನೀಡಲಾಗುವ ರೂ. 1.00 ಲಕ್ಷಗಳ ಕೃವಿವಿ ಅನುಧಾನವನ್ನು ರೂ. 1.50 ಲಕ್ಷಗಳಿಗೆ ಹೆಚ್ಚಿಸುವ.**<br>**ಠರಾವು:**<br>ಚರ್ಚೆಯ ನಂತರ, ಹೊರದೇಶಗಳಲ್ಲಿ ಜರುಗುವ ಅಚಿತರ ರಾಷ್ಟ್ರೀಯ ವಿಚಾರ ಸಂಕೀರ್ಣ / ಕಾರ್ಯಾಗಾರ / ಸಮ್ಮೇಳನ ಇತ್ಯಾದಿಗಳಲ್ಲಿ ಭಾಗವಹಿಸುವ ಕೃವಿವಿ., ರಾಯಚೂರಿನ ಶಿಕ್ಷಕರು / ವಿಜ್ಞಾನಿಗಳಿಗೆ ಪ್ರಸ್ತುತ ನೀಡಲಾಗುವ ರೂ. 1.00 ಲಕ್ಷಗಳ ಅನುಧಾನವನ್ನು ಪರಿಷ್ಕರಿಸಿ, ಏಷ್ಯಾ ಖಂಡದ ದೇಶಗಳಿಗೆ ರೂ. 1.00 ಲಕ್ಷ ಮತ್ತು ಏಷ್ಯಾ ಖಂಡದ ದೇಶಗಳನ್ನು ಹೊರತುಪಡಿಸಿ ಇತರೆ ದೇಶಗಳಿಗೆ ರೂ. 1.50 ಲಕ್ಷಗಳ ಅನುಧಾನವನ್ನು ವಿಶ್ವವಿದ್ಯಾಲಯದಿಂದ ನೀಡಲು ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಿತು.<br>(ಕ್ರಮ : ಕುಲಸಚಿವರು) |
| ಐಟಂ–6 | **ಕೃವಿವಿ., ರಾಯಚೂರಿನ ಶಿಕ್ಷಕರ ಸಿ.ಎ.ಎಸ್.–2006 ಅಡಿ ಪದೋನ್ನತಿಯ ಅರ್ಹತಾ ದಿನಾಂಕವನ್ನು ತಿದ್ದುಪಡಿ ಮಾಡುವ ಕುರಿತು.**<br>ಡಾ. ಜೆ. ದಿವಾನ್ ಮತ್ತು ಶ್ರೀ ಶಿವಕುಮಾರ್ ಇವರುಗಳಿಗೆ ತರಬೇತಿ ಅವಧಿಯನ್ನು ಮುಗಿಸಿದ ದಿನಾಂಕದಂದು ಅರ್ಹರನ್ನಾಗಿಸಿ ನೀಡಿದ ಪದೋನ್ನತಿಯನ್ನು ಮರುಪರಿಶೀಲಿಸಿ, ಯು.ಜಿ.ಸಿ. ಯ ದಿನಾಂಕ 16–10–2018 ರ ಸಾರ್ವಜನಿಕ ನೋಟೀಸ್ ಸಂ.2 ((16-002-ps)-Pt-Fi-II) ಅನ್ವಯ ವಿನಾಯಿತಿ ನೀಡಲು ಕೋರಿರುತ್ತಾರೆ. |

| | |
|---|---|
| | ಠರಾವು:<br>ಚರ್ಚೆಯ ನಂತರ, ಯು.ಜಿ.ಸಿ. ಯ ದಿನಾಂಕ 16–10–2018 ರ ಸಾರ್ವಜನಿಕ ನೋಟೀಸ್ ಸಂ.2 ((16-002-ps)-Pt-Fi-II) ರಲ್ಲಿ ಸಿ.ಎ.ಎಸ್. 2006 ಅಡಿ ಪದೋನ್ನತಿಗೆ ನಿಗದಿತ ಅವಧಿಯಲ್ಲಿ ಕನಿಷ್ಠ ತರಬೇತಿಗಳನ್ನು ಪಡೆದಿರಬೇಕಾದ ವಿಷಯಕ್ಕೆ ವಿನಾಯತಿ ನೀಡಿದ್ದರಿಂದ ಡಾ. ಜೆ. ದಿವಾನ್ ಮತ್ತು ಶ್ರೀ ಶಿವಕುಮಾರ್ ಇವರುಗಳ ಪದೋನ್ನತಿಯ ಅರ್ಹತಾ ದಿನಾಂಕವನ್ನು ತಿದ್ದುಪಡಿ ಮಾಡಲು ಮಂಡಳಿಯು ಅನುಮೋದನೆ ನೀಡಿತು.<br>(ಕ್ರಮ : ಕುಲಸಚಿವರು) |
| | ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು |
| 1. | **ಕೃಷಿ ಇಲಾಖೆಯಿಂದ ಚಿತ್ತಾಪುರ ಬೀಜೋತ್ಪಾದನಾ ಕೇಂದ್ರವನ್ನು ಕೃವಿವಿ., ರಾಯಚೂರಿಗೆ ಹಸ್ತಾಂತರಿಸಿದ ಅವಧಿಯನ್ನು ವಿಸ್ತರಿಸುವ ಕುರಿತು.**<br>ಶ್ರೀ ವೀರನಗೌಡ ಪರಸರೆಡ್ಡಿ, ಮಾನ್ಯ ಸದಸ್ಯರು, ವ್ಯವಸ್ಥಾಪನಾ ಮಂಡಳಿಯ ಇವರು ಚಿತ್ತಾಪುರ ಬೀಜೋತ್ಪಾದನಾ ಕೇಂದ್ರವನ್ನು ಕೃವಿವಿ., ರಾಯಚೂರಿಗೆ ಹಸ್ತಾಂತರಿಸುವ ಕುರಿತಾದ ದಿನಾಂಕ 9–7–2019 ರ ಕೃಷಿ ಇಲಾಖೆಯ ಪತ್ರವನ್ನು ಮಂಡಳಿಯ ಮುಂದೆ ಮಂಡಿಸಿದರು.<br>**ಠರಾವು :**<br>ಮಂಡಳಿಯು ಈ ಕುರಿತು ಚರ್ಚಿಸಿ, ವಿಶ್ವವಿದ್ಯಾಲಯದಿಂದ ವಿವಿಧ ತಳಿಗಳ ಬೀಜೋತ್ಪಾದನಾ ಚಟುವಟಿಕೆಗಳನ್ನು ಕೈಗೊಳ್ಳುವ ಸಲುವಾಗಿ ಚಿತ್ತಾಪುರ ಬೀಜೋತ್ಪಾದನಾ ಕೇಂದ್ರದ ಲೀಸ್ ವಿಸ್ತರಣಾ ಅವಧಿಯನ್ನು ಇನ್ನೂ 99 ವರ್ಷಗಳ ಅವಧಿಗೆ ವಿಸ್ತರಿಸಲು ಸರ್ಕಾರಕ್ಕೆ ಮತ್ತೊಮ್ಮೆ ಸವಿವರವಾದ ಮನವಿ ಸಲ್ಲಿಸುವಂತೆ ಮಂಡಳಿಯು ನಿರ್ಧರಿಸಲಾಯಿತು.<br>**(ಕ್ರಮ : ಕುಲಸಚಿವರು / ಸಂಶೋಧನಾ ನಿರ್ದೇಶಕರು)** |
| 2. | **ಏಳನೇ ಕೇಂದ್ರೀಯ ವೇತನ ಆಯೋಗದ ಶಿಫಾರಸ್ಸುಗಳನ್ವಯ ರಾಯಚೂರು ಕೃವಿವಿಯ ವಿವಿಧ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ತಾಂತ್ರಿಕ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರಿಗೆ ಐ.ಸಿ.ಎ.ಆರ್. ನ ಪರಿಷ್ಕೃತ ವೇತನ ಶ್ರೇಣಿಯ ಸೌಲಭ್ಯಗಳನ್ನು ನೀಡಲು ಅನುಮೋದನೆ ಕುರಿತು.**<br>**ಠರಾವು :**<br>ಏಳನೇ ಕೇಂದ್ರೀಯ ವೇತನ ಆಯೋಗದ ಶಿಫಾರಸ್ಸುಗಳನ್ವಯ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ವಿವಿಧ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ತಾಂತ್ರಿಕ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರಿಗೆ ಐ.ಸಿ.ಎ.ಆರ್. ನ ಪರಿಷ್ಕೃತ ವೇತನ ಶ್ರೇಣಿಗಳನ್ನು ಹಾಗೂ ಇತರೇ ಸೌಲಭ್ಯಗಳನ್ನು ಅಳವಡಿಸಿಕೊಂಡು ದಿನಾಂಕ 1–1–2016 ರಿಂದ ಅನ್ವಯವಾಗುವಂತೆ ಸದರಿ ಸೌಲಭ್ಯಗಳನ್ನು ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.<br>**(ಕ್ರಮ : ಆಡಳಿತಾಧಿಕಾರಿ)** |
| 3. | **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಬಂಗಾರದ ಪದಕವನ್ನು ಸ್ಥಾಪಿಸುವ ಕುರಿತು.**<br>**ಠರಾವು :**<br>ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಬಿ.ಎಸ್ಸಿ. (ಕೃಷಿ) ಮತ್ತು ಬಿ.ಟೆಕ್ (ಕೃಷಿ ತಾಂತ್ರಿಕ) ಪದವಿಯಲ್ಲಿ ಅತೀ ಹೆಚ್ಚಿನ ಅಂಕಗಳನ್ನು ಪಡೆದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಎರಡು ಬಂಗಾರದ ಪದಕಗಳನ್ನು ನೀಡುವ ಸಲುವಾಗಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಬಂಗಾರದ ಪದಕವನ್ನು ಸ್ಥಾಪಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು. ಇದಕ್ಕೆ ತಗಲುವ ವೆಚ್ಚ ರೂ. 2.00 ಲಕ್ಷಗಳನ್ನು (ಪ್ರತಿ ಪದಕಕ್ಕೆ ರೂ. 1.00 ಲಕ್ಷ ಠೇವಣಿ) ಕೃವಿವಿ., ರಾಯಚೂರಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ನೌಕರರ ಸಂಘ ಇವರಿಂದ ಪಡೆದು ನಿಯಮಾನುಸಾರ ಕ್ರಮಕೈಗೊಳ್ಳುವಂತೆ ನಿರ್ಧರಿಸಲಾಯಿತು. **(ಕ್ರಮ : ಕುಲಸಚಿವರು)** |

| | |
|---|---|
| 4. | ಮಾನ್ಯ ವ್ಯವಸ್ಥಾಪನಾ ಮಂಡಳಿಯ ಪದನಿಮಿತ್ತ ಅಧಿಕಾರಿ ಸದಸ್ಯರ ಆಸನ ಶುಲ್ಕವನ್ನು ಪರಿಷ್ಕರಿಸುವ ಕುರಿತು.<br><br>ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಪದನಿಮಿತ್ತ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅಧಿಕಾರಿ ಸದಸ್ಯರುಗಳು ಮಂಡಳಿಯ ಸಭೆಗೆ ಹಾಜರಾದಲ್ಲಿ ಅವರುಗಳಿಗೆ ಪ್ರಸ್ತುತ ರೂ. 1,000/- ಗಳ ಆಸನ ಶುಲ್ಕವನ್ನು ನೀಡಲಾಗುತ್ತಿದ್ದು, ಇತರೆ ವಿಶ್ವವಿದ್ಯಾಲಯಗಳಲ್ಲಿ ನೀಡಲಾಗುತ್ತಿರುವಂತೆ ರೂ. 3,000/- ಗಳಿಗೆ ಹೆಚ್ಚಿಸಿ, ಆಸನ ಶುಲ್ಕವನ್ನು ಪರಿಷ್ಕರಿಸಲು ಪ್ರಸ್ತಾಪಿಸಲಾಯಿತು.<br><br>ಠರಾವು :<br>ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಪದನಿಮಿತ್ತ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅಧಿಕಾರಿ ಸದಸ್ಯರುಗಳು ಮಂಡಳಿಯ ಸಭೆಗೆ ಹಾಜರಾದಲ್ಲಿ ಅವರುಗಳಿಗೂ ಸಹ ಪ್ರಸ್ತುತ ನೀಡಲಾಗುತ್ತಿರುವ ಆಸನ ಶುಲ್ಕವನ್ನು ರೂ. 1,000/- ದಿಂದ ರೂ. 3,000/- ಗಳಿಗೆ ಹೆಚ್ಚಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.<br><br>(ಕ್ರಮ : ಕುಲಸಚಿವರು) |

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /- 14-9-2019 | ಸಹಿ /- 14-9-2019 |
|---|---|
| (ಕೆ.ಎನ್. ಕಟ್ಟಿಮನಿ)<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | (ಎಂ.ಜಿ. ಪಾಟೀಲ)<br>ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

(ಎಂ.ಜಿ. ಪಾಟೀಲ)
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.